ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

ದಿನಾಂಕ: 05.04.2019

## ಪತ್ರಿಕಾ ಪ್ರಕಟಣೆ

ಬೆಂಗಳೂರು ನಗರದ ನಿವಾಸಿಯೊಬ್ಬರು ಖರೀದಿಸಿರುವ ನಿವೇಶನದ ಕ್ರಯಪತ್ರ ನೊಂದಣಿಗಾಗಿ ಜಾಲ ಉಪ ನೋಂದಣಾಧಿಕಾರಿಗಳ ಕಛೇರಿ, ಚಿಕ್ಕ ಜಾಲ ಹೋಬಳಿ ಇಲ್ಲಿ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. ಶ್ರೀ.ಭಾಸ್ಕರ ಸಿದ್ರಮಪ್ಪ ಚೌರ, ಉಪ ನೋಂದಣಾಧಿಕಾರಿಗಳು, ಜಾಲ ಉಪನೋಂದಣಾಧಿಕಾರಿಗಳ ಕಛೇರಿ, ಚಿಕ್ಕಜಾಲ, ಬೆಂಗಳೂರು ರವರು ಅರ್ಜಿದಾರರ ನಿವೇಶನದ ಕ್ರಯಪತ್ರ ನೊಂದಣಿಗಾಗಿ ರೂ.15,000/- ರೂಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ: 05.04.2019ರಂದು ಶ್ರೀ.ಭಾಸ್ಕರ ಸಿದ್ರಮಪ್ಪ ಚೌರ ರವರು ದೂರುದಾರರಿಂದ ರೂ.15,000/- ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ಪ್ರಕರಣದ ತನಿಖೆ ಮುಂದುವರೆದಿದೆ.